# ಯಶಸ್ಸು ಕಂಡ ರನ್ ಯುವರ್ ಸ್ಕೂಲ್

ತಕ್ಷಣ O+ ರಕ್ತ ಬೇಕಾಗಿದೆ ಎಂಬ ಮೆಸೇಜ್ ಮೊಬೈಲ್‌ಗೆ ಬಂದ ಕೂಡಲೇ ಹಿಂದೆ ಮುಂದೆ ನೋಡದೆ ಅದನ್ನು ಗೆಳೆಯರಿಗೆಲ್ಲ ಫಾರ್ವರ್ಡ್ ಮಾಡಿಬಿಡುತ್ತೀರಿ. ಆಮೇಲೇನಾಯಿತು.. ರಕ್ತ ಸಿಕ್ಕಿತೋ, ಪೇಷಂಟ್ ಏನಾದ.. ಊಹೂಂ.. ಅದರ ಬಗ್ಗೆ ತಲೆ ಕೆಡಿಸಿಕೊಳ್ಳುವವರು ಕಡಿಮೆ.

ಆದರೆ ಅಂಥ ವಿಚಾರಗಳ ಬಗ್ಗೆ ತಲೆಕೆಡಿಸಿಕೊಳ್ಳುವವರೂ ಇದ್ದಾರೆ. ಬೆಂಗಳೂರಿನ ಸ್ವಯಂ ಸೇವಾ ಸಂಸ್ಥೆ ಈಗ ಇಂಥ ಹೊಸ ಸಾಹಸಕ್ಕೆ ಕೈ ಹಾಕಿದೆ. ಅದುವೇ ಯುವ ಬೆಂಗಳೂರು ಸಂಘಟನೆಯ ಬ್ಲಡ್ ಕಾಲ್ ಸೆಂಟರ್. ನಿಮಗೆ ಯಾವ ಬಗೆಯ ಬ್ಲಡ್ ಬೇಕೆಂದು ಫೋನ್ ಮಾಡಿ ಹೇಳಿದರೆ ಸಾಕು ಒಂದು ಗಂಟೆಯೊಳಗೆ ವಿನಿಮಯ ಆಧಾರದ ಮೇಲೆ ಅದನ್ನು ರೆಡಿ ಮಾಡಿಕೊಡುತ್ತದೆ ಈ ಯುವಕರ ಪಡೆ. ಈ ಹೊಸ ಸೇವೆ ಈಚೆಗಷ್ಟೇ ಆರಂಭವಾಗಿದೆ (ದೂ ಸಂಖ್ಯೆ 98453 13000)


ಕಿರಣ್

ಇದೇನು 'ಯುವ ಬೆಂಗಳೂರು' ಸಂಘಟನೆಯ ಚೊಚ್ಚಲ ಕಾರ್ಯವಲ್ಲ. ಒಂದೆರಡು ವರ್ಷಗಳಿಂದ ಇಂಥದ್ದೇ ಹಲವು ಜನಪರ ಕಾರ್ಯದಲ್ಲಿ ಇವರು ತೊಡಗಿದ್ದಾರೆ. ಇದರಲ್ಲಿರುವವರು ಬಹುತೇಕ ಇದು ವೃತ್ತಿಪರ ಟೆಕಿಗಳು, ವೈದ್ಯರು ಮತ್ತು ಕೊಂಚ ವಿದ್ಯಾರ್ಥಿಗಳು. ವಾರದ ಐದು ದಿನ ಕಚೇರಿಯ ಕೆಲಸದ ಒತ್ತಡಕ್ಕೆ ಸಿಲುಕಿದ ಈ ಯುವಸಮೂಹಕ್ಕೆ ವೀಕೆಂಡ್‌ನ್ನು ವೇಸ್ಟ್ ಮಾಡಲು ಮನಸ್ಸಿಲ್ಲ. ಹಾಗಾಗಿ, ಒಂದಲ್ಲ ಒಂದು ಅರ್ಥಪೂರ್ಣ ಕೆಲಸದಲ್ಲಿ ತೊಡಗಿಸಿಕೊಳ್ಳುವ ಬಯಕೆ. ಇದಕ್ಕೆ ಇವರಿಗೆ ಆಸರೆಯಾಗಿದ್ದು ಯುವ ಬೆಂಗಳೂರು.




ಇಂಥದ್ದೊಂದು ಸಂಘಟನೆ ಹುಟ್ಟಿಕೊಂಡಿದ್ದೇ ಕುತೂಹಲದ ಕತೆ. ಮೊದಲಿನಿಂದಲೂ ಇಂಥದ್ದೇ ಸಮಾಜ ಸೇವೆಯಲ್ಲಿ ತೊಡಗಿಸಿಕೊಳ್ಳಬೇಕೆನ್ನುವ ಹುಮ್ಮಸ್ಸು ಕಿರಣ್ ಗಂಗಾಧರ್‌ಗೆ ಇತ್ತು. ಮಾಜಿ ರಾಷ್ಟ್ರಪತಿ ಎಪಿಜೆ ಅಬ್ದುಲ್ ಕಲಾಂ ಅವರಿಂದ ಉತ್ತೇಜಿತರಾದ ಕಿರಣ್ ಒಮ್ಮೆ ಕಾಫಿ ಡೇನಲ್ಲಿ ತಣ್ಣಗೆ ಕುಳಿತು ಕಾಫಿ ಹೀರುತ್ತಿದ್ದಾಗ ಇಂಥದ್ದೊಂದು ವೇದಿಕೆಯ ಹುಟ್ಟು ಫ್ಲ್ಯಾಷ್ ಆಯಿತು. ಎಚ್‌ಪಿ ಕಂಪೆನಿ ಉದ್ಯೋಗಿ ಕಿರಣ್ ಸಮಾನಮನಸ್ಕರ ಜತೆಗೂಡಿ ಯುವ ಬೆಂಗಳೂರು ಹುಟ್ಟಿಗೆ ಕಾರಣರಾದರು. 2008ರಲ್ಲಿ ಬರೀ ಎಂಟು ಜನ ಯುವ ಟೆಕಿಗಳು ಸೇರಿಕೊಂಡು ಕಟ್ಟಿದ ಕೂಟದಲ್ಲಿ ಇಂದು 700ಕ್ಕೂ ಹೆಚ್ಚು ಜನ ಸದಸ್ಯರಿದ್ದಾರೆ.

**ಮೊದಲ ಪಾಠ:** ಶೇಷಾದ್ರಿಪುರದಲ್ಲಿರುವ 79 ವರ್ಷಗಳಷ್ಟು ಹಳೆಯ ದೀನ್ ಸೇವಾ ಸಂಘ ಶಾಲೆಯನ್ನು ದತ್ತು ಪಡೆದುಕೊಂಡಿತು ಈ ಸಂಘಟನೆ. ಆರಂಭದಲ್ಲಿ ಅಲ್ಲಿನ ಮಕ್ಕಳಿಗೆ ಪಾಠ ಹೇಳುವ ಕೆಲಸಕ್ಕೆ ಕೈ ಹಾಕಿದರು ಈ ಹುಡುಗರು. ಪ್ರತಿ ಶನಿವಾರ ಶಾಲೆಗೆ ಬಂದು ತಮಗೆ ಆಸಕ್ತಿ ಇರುವ ಸಬ್ಜೆಕ್ಟ್‌ನ ಪಾಠ ಮಾಡುತ್ತಿದ್ದರು. ಇದನ್ನು ನೋಡಿ ಇನ್ನೂ ಕೆಲವರು ಸೇರಿಕೊಂಡರು. ಎಂಜಿನಿಯರಿಂಗ್ ವಿದ್ಯಾರ್ಥಿಗಳೂ ಬಂದರು.

'ಈಗ 18 ಲಕ್ಷ ರೂಪಾಯಿ ವೆಚ್ಚದಲ್ಲಿ ಶಾಲೆಯನ್ನು ನವೀಕರಣ ಮಾಡುತ್ತಿದ್ದೇವೆ. ಬಂದು ನೋಡಿ..' ಎಂದು ಹೆಮ್ಮೆಯಿಂದ ಕಿರಣ್ ಹೇಳುತ್ತಾರೆ. 'ರನ್ ಯುವರ್ ಸ್ಕೂಲ್" ಎಂಬ ಹೆಸರಿನಲ್ಲಿ ಮತ್ತಷ್ಟು ಶಾಲೆಗಳನ್ನು ದತ್ತು ತೆಗೆದುಕೊಳ್ಳುವ ಉತ್ಸಾಹ ಇವರಲ್ಲಿದೆ. ಇಲ್ಲಿನ ಸ್ವಯಂ ಸೇವಕರು ತಾವೇ ಕೈನಿಂದ ಹಣ ಹಾಕುವುದು ವಿಶೇಷ. ಜತೆಗೆ ದಾನಿಗಳ ನೆರವನ್ನೂ ಪಡೆಯುತ್ತಾರೆ. ಶೇಷಾದ್ರಿಪುರ ಶಾಲೆಯ ಯಶಸ್ಸಿನ ಹಿನ್ನೆಲೆಯಲ್ಲಿ ಈ ಸಂಘಟನೆಯ ಕಾರ್ಯವ್ಯಾಪ್ತಿ ವಿಸ್ತಾರವಾಯಿತು. ಈಗ ಇಲ್ಲಿ 700ಕ್ಕೂ ಹೆಚ್ಚು ಸ್ವಯಂ ಸೇವಕರು ವಿವಿಧೆಡೆ ಸಮಾಜ ಸೇವೆಯಲ್ಲಿ ತೊಡಗಿಸಿಕೊಂಡಿದ್ದಾರೆ.

ಈ ಸಂಘಟನೆ ಇಂದು ರಾಮನಗರ ಜಿಲ್ಲೆಯ ಹತ್ತು ಹಳ್ಳಿಗಳನ್ನು ದತ್ತು ತೆಗೆದುಕೊಂಡಿದೆ. 'ಟೈಮ್ ಸಿಕ್ಕಾಗಲೆಲ್ಲ ನಗರದ ಟೆಕಿಗಳು ಹಳ್ಳಿಗೆ ಹೋಗಿ ಅಲ್ಲಿ ತಮ್ಮ ಮಿತಿಯಲ್ಲಿ ಎಷ್ಟಾಗುತ್ತೋ ಸೇವೆ ಮಾಡಿ ಬರುತ್ತಾರೆ. ಇದಕ್ಕೆ ಸಂಸದ ಎಚ್.ಡಿ.ಕುಮಾರಸ್ವಾಮಿ ಬೆಂಬಲಿಸುತ್ತಿದ್ದಾರೆ' ಎಂದು ಕಿರಣ್ ಹೇಳುತ್ತಾರೆ.

ಸಾಫ್ಟ್‌ವೇರ್ ಎಂಜಿನಿಯರ್ ಪ್ರಿಯಾಂಕ, ಎಚ್‌ಪಿ ಕಂಪೆನಿಯ ಹಿರಿಯ ಸಾಫ್ಟ್‌ವೇರ್ ಡೆವಲಪರ್ ಪಿ.ಗುರುರಾಜ್, ಗ್ಲೋಬಲ್ಸ್‌ನ ಕೆ.ಎಂ.ಮಿಥುನ್, ಶಾಂತಲಾ ಭಟ್, ಮೌಂಟ್ ಕಾರ್ಮೆಲ್ ಕಾಲೇಜಿನ ವಿದ್ಯಾರ್ಥಿನಿ ತನು ಕುಲಕರ್ಣಿ, ಸೋನಾಲ್.. ಇವರಿಗೆಲ್ಲ ಸ್ಯಾಟರ್‌ಡೇ - ಸಂಡೇ ಎಂದರೆ... ಫುಲ್ ಬಿಝಿ. ಎಲ್ಲಾದರೂ ಒಂದು ಕಡೆ ಸದ್ದಿಲ್ಲದೆ ತಮ್ಮಿಂದಾದ ಸೇವೆಯಲ್ಲಿ ಮುಳುಗಿರುತ್ತಾರೆ. ಇವರ ಜತೆ ನಿಮಗೂ ಜಾಯಿನ್ ಆಗುವ ಆಸೆ ಇದ್ದರೆ. http://yuvabengaluru.org/ ವೆಬ್‌ಸೈಟ್ ನೋಡಿ. ಅಥವಾ ಕಿರಣ್ ಅವರನ್ನೇ ಸಂಪರ್ಕಿಸಿ- 99000 51926

bkganesh@vijayanext.com

---

ನಿರ್ಮಲಮ್ಮ, ಶೋಭಾ, ವೆಂಕಟೇಶ್ ಇದ್ದರು.

# ಸರ್ಕಾರಿ ಶಾಲೆಯಿಂದ ಕನ್ನಡ ಉಳಿವು

ಮಾಗಡಿ: ಕನ್ನಡ ಭಾಷೆ ಉಳಿಯಬೇಕಾದರೆ ಸರ್ಕಾರಿ ಶಾಲೆ ಉಳಿಯಬೇಕು. ಈ ನಿಟ್ಟಿನಲ್ಲಿ ಸರ್ಕಾರಿ ಶಾಲೆ ದತ್ತು ಪಡೆದು ಮೂಲ ಸೌಲಭ್ಯ ನೀಡಲಾಗುತ್ತದೆ ಎಂದು ಯುವ ಬೆಂಗಳೂರು ಟ್ರಸ್ಟ್ ಸಂಸ್ಥಾಪಕ ಜಿ.ಕಿರಣ್ ಹೇಳಿದರು.

ಹೊಂಬಾಳಮ್ಮನ ಪೇಟೆ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶನಿವಾರ ಉಚಿತ ಬ್ಯಾಗ್ ಮತ್ತು ಶೈಕ್ಷಣಿಕ ಸಾಮಗ್ರಿ ವಿತರಣೆ ಸಮಾರಂಭ ಉದ್ಘಾಟಿಸಿ ಮಾತನಾಡಿದರು. ಪ್ರಸ್ತುತ ಶಿಕ್ಷಣ ಕ್ಷೇತ್ರ ವ್ಯವಹಾರವಾಗಿ ಬದಲಾಗಿದೆ. ಎಲ್ಲ ಮಕ್ಕಳು ಖಾಸಗಿ ಶಾಲೆಯಲ್ಲಿ ಓದಲು ಸಾಧ್ಯವಿಲ್ಲ. ಸರ್ಕಾರಿ ಶಾಲೆಗಳು ಮುಚ್ಚಿದರೆ ಬಡ ಮಕ್ಕಳಿಗೆ ಶಿಕ್ಷಣವೇ ಇಲ್ಲದಂತಾಗುತ್ತದೆ ಎಂದರು.

ಸರ್ಕಾರಿ ಶಾಲೆಗಳನ್ನು ಉಳಿಯುವ ನಿಟ್ಟಿನಲ್ಲಿ ನಮ್ಮ ಟ್ರಸ್ಟ್ ವತಿಯಿಂದ 3 ವರ್ಷಗಳಿಂದ ಮಾಗಡಿ ತಾಲ್ಲೂಕಿನ ಸರ್ಕಾರಿ ಶಾಲೆಗಳಿಗೆ ಸೌಲಭ್ಯ ನೀಡುತ್ತಿದ್ದೇವೆ. ಈ ವರ್ಷದಿಂದ 100 ಶಾಲೆ ದತ್ತು ಪಡೆಯಲಾಗುವುದು. ಅಂಗನವಾಡಿ ಕಟ್ಟಡ ಅಭಿವೃದ್ಧಿ ಪಡಿಸಲಾಗುವುದು ಎಂದು ತಿಳಿಸಿದರು.

ಕ್ಷೇತ್ರ ಶಿಕ್ಷಣಾಧಿಕಾರಿ ಎಸ್.ಸಿದ್ದೇಶ್ವರ್ ಮಾತನಾಡಿ, ಯುವ ಬೆಂಗಳೂರು ಟ್ರಸ್ಟ್


ಮಾಗಡಿ ಹೊಂಬಾಳಮ್ಮನ ಪೇಟೆ ಸರ್ಕಾರಿ ಶಾಲೆ ವಿದ್ಯಾರ್ಥಿಗಳಿಗೆ ಯುವ ಬೆಂಗಳೂರು ಟ್ರಸ್ಟ್ ವತಿಯಿಂದ ಬ್ಯಾಗ್ ವಿತರಿಸಲಾಯಿತು. ಬಿಇಒ ಸಿದ್ದೇಶ್ವರ್, ಟ್ರಸ್ಟ್ ಅಧ್ಯಕ್ಷ ಕಿರಣ್ ಸಾಗರ್ ಇದ್ದರು.

ಮಾಡುತ್ತಿರುವ ಕಾರ್ಯ ಮಾದರಿ. ಎಸ್‌ಸಿ, ಎಸ್‌ಟಿ ಮಕ್ಕಳಿಗೆ ಮಾತ್ರ ಬ್ಯಾಗ್ ವಿತರಿಸುತ್ತಿರುವುದರಿಂದ ಇತರ ಮಕ್ಕಳಿಗೆ ಅನ್ಯಾಯವಾಗುವುದನ್ನು ಮನಗಂಡು ಯುವ ಬೆಂಗಳೂರು ಟ್ರಸ್ಟ್ ವತಿಯಿಂದ ಬ್ಯಾಗ್ ನೀಡಲಾಗುತ್ತಿದೆ ಎಂದರು.

ಯುವ ಬೆಂಗಳೂರು ಟ್ರಸ್ಟ್‌ನಲ್ಲಿ 12 ಸಾವಿರ ಸದಸ್ಯರಿದ್ದಾರೆ. ಸರ್ಕಾರಿ ಶಾಲೆಗಳು ಉಳಿಸಲು ಪ್ರಯತ್ನಿಸಲಾಗುತ್ತಿದೆ. ಎಪಿಜೆ ಅಬ್ದುಲ್ ಕಲಾಂ ಪ್ರೇರಣೆಯಿಂದ ಸಂಸ್ಥೆ ಪ್ರಾರಂಭವಾಗಿದ್ದು, ಸರ್ಕಾರಿ ಶಾಲಾ ಮಕ್ಕಳಿಗೂ ಉತ್ತಮ ಶಿಕ್ಷಣ ದೊರೆಯುವಂತಾಗಬೇಕು ಎಂದು ಟ್ರಸ್ಟ್ ಉಪಾಧ್ಯಕ್ಷ ಬಿ.ವಿ.ಸುನೀಲ್ ಹೇಳಿದರು.

ಮೊದಲ ಹಂತವಾಗಿ 100 ವಿದ್ಯಾರ್ಥಿಗಳಿಗೆ ಬ್ಯಾಗ್ ಹಾಗೂ ಕಲಿಕಾ ಸಾಮಗ್ರಿ ವಿತರಿಸಲಾಯಿತು. ಹೊಂಬಾಳಮ್ಮನ ಪೇಟೆ ಶಾಲೆ ಮುಖ್ಯಶಿಕ್ಷಕ ಸಿ.ಅಂಜನಪ್ಪ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಅಧ್ಯಕ್ಷ ಕೆ.ಪಿ.ರೇಣುಕಾರಾಧ್ಯ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ಜಿಲ್ಲಾಧ್ಯಕ್ಷ ಕೆ.ಎಚ್.ಲೋಕೇಶ್, ಶಿಕ್ಷಕರಾದ ಶಿವರಾಮಯ್ಯ, ಬಿ.ಎನ್.ಜಯರಾಂ, ಪತಿಗೌಡ, ಬಸವರಾಜು, ಮುನಿಯಪ್ಪ ಇದ್ದರು.

# ಪತ್ರಕರ್ತರಿಗೆ ಆರೋಗ್ಯ ಕಿಟ್ ವಿತರಣೆ

**ಮಾಗಡಿ** : ಯುವ ಬೆಂಗಳೂರು ಟ್ರಸ್ಟ್ ವತಿಯಿಂದ ಮಾಗಡಿ ತಾಲೂಕಿನ ಪತ್ರಕರ್ತರಿಗೆ ಆರೋಗ್ಯ ಕಿಟ್‌ನ್ನು ವಿತರಣೆ ಮಾಡಲಾಯಿತು.

ಪಟ್ಟಣದ ಸೋಮೇಶ್ವರ ದೇವಸ್ಥಾನದ ಆವರಣದಲ್ಲಿ ಯುವ ಬೆಂಗಳೂರು ಟ್ರಸ್ಟ್‌ನ ಉಪಾಧ್ಯಕ್ಷ ಸುನೀಲ್ ಮಾತನಾಡಿ, ಕೋರೊನ ಲಾಕ್ ಡೌನ್ ಸಮಯದಲ್ಲಿ ಪತ್ರಕರ್ತರು ತಮ್ಮ ಆರೋಗ್ಯವನ್ನು ಲೆಕ್ಕಿಸದೆ ಸುದ್ದಿಗಾಗಿ ಸಾಕಷ್ಟು ಓಡಾಡಿದ್ದಾರೆ. ಅವರಿಗೂ ಕೂಡ ಸುರಕ್ಷತೆ ಅತೀ ಮುಖ್ಯ ಈ ನಿಟ್ಟಿನಲ್ಲಿ ಯುವ ಬೆಂಗಳೂರು ಟ್ರಸ್ಟ್‌ನ ಅಧ್ಯಕ್ಷರಾದ ಕಿರಣ್ ಸಾಗರ್ ರವರು ಮಾಗಡಿ ತಾಲೂಕಿನ ಪತ್ರಕರ್ತರಿಗೆ ಆರೋಗ್ಯ ಕಿಟ್‌ನ್ನು ನೀಡಿದ್ದು ಇದರಲ್ಲಿ ಎನ್95 ಮಾಸ್ಕ್, ಗ್ಲೌಸ್, ಸ್ಯಾನಿಟೈಸರ್, ಫೇಸ್ ಶೀಲ್ಡ್, ವಿಟಮಿನ್ ಸಿ ಮಾತ್ರೆ, ಡೋಲೋ ಮಾತ್ರೆ ಒಳಗೊಂಡ ಕಿಟ್‌ನ್ನು ನೀಡಿ–ದ್ದು ಮುಂದಿನ ದಿನಗಳಲ್ಲಿ ಪತ್ರಕರ್ತರಿಗೆ ಇನ್ನಷ್ಟು ಅನುಕೂಲತೆಗಳನ್ನು ಯುವ ಬೆಂಗಳೂರು ಟ್ರಸ್ಟ್‌ನಿಂದ ಮಾಡಲಾಗುತ್ತದೆಂದು ತಿಳಿಸಿದರು.

ಲಾಕ್‌ಡೌನ್‌ನಲ್ಲಿ ಬಡವರಿಗೆ ಸೇವೆ : ಯುವ ಬೆಂಗಳೂರು ಟ್ರಸ್ಟ್ 11 ಸಾವಿರಕ್ಕೂ ಹೆಚ್ಚು ಸ್ವ–ಯಂ ಸೇವಕರನ್ನು ಒಳಗೊಂಡಿದ್ದು ಎಲ್ಲಾರೂ ಕೂಡ ಉನ್ನತ ಮಟ್ಟದ ಉದ್ಯೋಗದಲ್ಲೆ ಇದ್ದು ಲಾಕ್ ಡೌನ್ ಸಮಯದಲ್ಲಿ ಜನಗಳ ಪರವಾಗಿ ನಿಲ್ಲುವ ಕೆಲಸ ಮಾಡಿದ್ದು ಬೆಂಗಳೂರಿನಲ್ಲಿ 1200 ಕ್ಕೂ ಹೆಚ್ಚು ಮಂಗಳಮುಖಿಯವರಿಗೆ ದಿನಸಿ ಕಿಟ್ ನೀಡಲಾಗಿದೆ.ಲಾಕ್ ಡೌನ್ ಸಮಯದಲ್ಲಿ ಪ್ರತಿ ದಿನ 500 ಕ್ಕೂ ಹೆಚ್ಚು ಮಂದಿಗೆ ಊಟದ ವ್ಯವಸ್ಥೆಯನ್ನು ಮಾಡಿದ್ದು ಕಳೆದ 6 ವರ್ಷಗಳಿಂದ 150 ಕ್ಕೂ ಹೆಚ್ಚು ಸರ್ಕಾರಿ ಶಾಲೆಗಳಿಗೆ ಪ್ರತಿ ವರ್ಷವು ಸ್ಕೂಲ ಬ್ಯಾಗ್, ಪುಸ್ತಕ, ಶಾಲೆಗೆ ಬೇಕಾದ ಕಲಿಕ ಸಾಮಾಗ್ರಿಗಳು, ಕ್ರೀಡಾ ಸಾಮಾಗ್ರಿಗಳನ್ನು ವಿತರಣೆ ಮಾಡಿದ್ದು ಕಳೆದ ವರ್ಷ ಲಾಕ್ ಡೌನ್‌ನಿಂದ ಶಾಲೆ ಮುಚ್ಚಿದ ಕಾರಣ ಯಾವುದೇ ಸಾಮಾಗ್ರಿಗಳನ್ನು ನೀಡಲು ಆಗಿಲ್ಲ ಈ ವರ್ಷ ಶಾಲೆ ಆರಂಭವಾದ ಕೂಡಲೆ ಎಲ್ಲಾ ಮಕ್ಕಳಿಗೂ ಸ್ಕೂಲ್ ಕಿಟ್‌ಗಳನ್ನು ನೀಡುತ್ತೇವೆಂದು ಸುನೀಲ್ ತಿಳಿಸಿದರು.



ಪತ್ರಕರ್ತ ತಿರುಮಲೆ ಶ್ರೀನಿವಾಸ್ ಮಾತನಾಡಿ, ಯುವ ಬೆಂಗಳೂರು ಟ್ರಸ್ಟ್‌ನ ಸದಸ್ಯರುಗಳು ತಾವು ದುಡಿದ ಹಣದಲ್ಲಿ ಸರ್ಕಾರಿ ಶಾಲಾ ಮಕ್ಕಳಿಗೆ ಅನುಕೂಲವಾಗುವ ರೀತಿ ಕೆಲಸ ಮಾಡುತ್ತಿದ್ದಾರೆ, ಜೊತೆಗೆ ಕೊರೊನ ವಾರಿಯರ್ಸ್ ಆಗಿ ಸೇವೆ ಮಾಡುತ್ತಿರುವ ನಮಗೂಕೂಡ ಆರೋಗ್ಯ ಕಿಟ್ ಕೊಡುವ ಮೂಲಕ ಪತ್ರಕರ್ತರ ಸಹಾಯಕ್ಕೆ ನಿಂತಿರುವುದಕ್ಕೆ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ಯುವ ಬೆಂಗಳೂರು ಟ್ರಸ್ಟ್‌ನ ಸ್ವ–ಯಂ ಸೇವಕರಾದ ಪ್ರವೀಣ್, ಹಿರಿಯ ಪತ್ರಕರ್ತ ಮಾರಣ್ಣ ಸೇರಿದಂತೆ ತಾಲೂಕು ಪತ್ರಕರ್ತರು ಜೊತೆಯಲ್ಲಿದ್ದರು.

---

# ಶಾಲೆಗೆ ಸ್ಮಾರ್ಟ್ ಬೋರ್ಡ್ ವಿತರಣೆ

• **ತಿಪಟೂರು:** ತಾಲೂಕಿನ ನೊಣವಿನಕೆರೆಯ ಕೆಪಿಎಸ್ ಪ್ರಾಥಮಿಕ ಶಾಲೆಗೆ ಬೆಂಗಳೂರಿನ ಸಂಸ್ಥೆಯಾದ ಯುವ ಬೆಂಗಳೂರು ಟ್ರಸ್ಟ್ ವತಿಯಿಂದ ಸ್ಮಾರ್ಟ್ ಬೋರ್ಡ್ ವಿತರಣೆ ಮಾಡಲಾಯಿತು.




ಇದೊಂದು ಸರ್ಕಾರೇತರ ಸಂಸ್ಥೆಯಾಗಿದ್ದು, ಕರ್ನಾಟಕ ರಾಜ್ಯಾದ್ಯಂತ ಸರ್ಕಾರಿ ಶಾಲೆಗಳ ಶ್ರೇಯೋಭಿವೃದ್ಧಿಗಾಗಿ ಸತತವಾಗಿ ಸುಮಾರು 12 ವರ್ಷಗಳಿಂದ ಶ್ರಮಿಸುತ್ತಿದೆ. ಸರ್ಕಾರಿ ಶಾಲೆಗಳ ಗುಣಮಟ್ಟ ಹೆಚ್ಚಿಸಲು ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ, ಉಚಿತ ನೋಟ್ ಬುಕ್ ವಿತರಣೆ, ಸ್ಪೋಕನ್ ಇಂಗ್ಲೀಷ್ ಕ್ಲಾಸ್, ಸ್ಮಾರ್ಟ್ ಬೋರ್ಡ್ ವಿತರಣೆ ಮುಂತಾದ ಸೌಲಭ್ಯಗಳನ್ನು ಒದಗಿಸುತ್ತಿದ್ದಾರೆ.

ನೊಣವಿನಕೆರೆ ಶಾಲೆಯ ಸ್ಮಾರ್ಟ್ ಬೋರ್ಡ್ ಉದ್ಘಾಟನಾ ಕಾರ್ಯಕ್ರಮದಲ್ಲಿ ಈ ಟ್ರಸ್ಟ್‌ನ ಸಂಸ್ಥಾಪಕ ಕಿರಣ್‌ಸಾಗರ್, ಯುವ ಬೆಂಗಳೂರು ಟ್ರಸ್ಟ್‌ನ ಸಂತೋಷ್ ಮತ್ತು ತೇಜಸ್ ಹಿರಿಯ ಶಿಕ್ಷಕಿ ಕವಿತಾ, ಅಭಿಲಾಷ, ರಮೇಶ್, ಹೇಮಲತಾ, ರೋಜಾ, ಅರ್ಪಿತಾ ಹಾಜರಿದ್ದರು.